**'ಅ'**

| | |
|---|---|
| (1) ಚ.ಅ.1ಕ್ಕೆ 3220ರೂ.ಗಳಂತೆ 492.45ಚ.ಅ.ಗಳಿಗೆ -(ಕಮರ್ಷಿಯಲ್) | - 15,85,689=00 |
| (2) ಶೇ.30ರಂತೆ ಸಲೋಷಿಯಂ ವೆಚ್ಚ | - 4,75,706=00 |
| (3) ಶೇ.12ರಂತೆ ಹೆಚ್ಚುವರಿ ಮಾರುಕಟ್ಟೆ ದರ-(1ವರ್ಷಕ್ಕೆ) | - 1,90,282=00 |
| ಒಟ್ಟು | **- 22,51,677=00** |

**'ಆ'**

| | |
|---|---|
| (1) ಶೇ.10ರಂತೆ ಆಡಳಿತ ವೆಚ್ಚ | - 2,25,167=00 |
| (2) ಶೇ.1ರಂತೆ ಅಡಿಟ್ ವೆಚ್ಚ | - 22,516=00 |
| (3) ಪ್ರಕಟಣಾ ವೆಚ್ಚ | - 1,50,000=00 |
| ಒಟ್ಟು | **- 3,97,683=00** |
| (ಅ+ಆ)= ಒಟ್ಟು ವೆಚ್ಚ ರೂ. | **- 26,49,360=00** |

**(ರೂ.ಇಪ್ಪತ್ತಾರು ಲಕ್ಷದ ನಲವತ್ತೊಂಭತ್ತು ಸಾವಿರದ ಮೂರು ನೂರ ಅರವತ್ತು ಗಳು ಮಾತ್ರ)**

ಭೂ-ಸ್ವಾಧೀನ ಕಾಯ್ದೆಯಡಿಯನ್ವಯ ಸುಮಾರು 492.45ಚದರ ಅಡಿ ಜಾಗವನ್ನು ಭೂ-ಸ್ವಾಧಿನಪಡಿಸಿಕೊಂಡು ಸ್ವತ್ತಿನ ಮಾಲೀಕರಿಗೆ ಮತ್ತು ಇತರೆ ವೆಚ್ಚಗಳು ಸೇರಿ ಒಟ್ಟು ರೂ.26,49,360=00ಗಳ ಪರಿಹಾರವನ್ನು ನೀಡಲು ಸೂಕ್ತ ತೀರ್ಮಾನ ಕೈಗೊಳ್ಳಲು ಆಡಳಿತಾಧಿಕಾರಿಗಳ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:10-07-2008ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:10-07-2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:24/07/2008 ರ ನಡವಳಿಗಳು

ವಿಷಯದ ಸಂಖ್ಯೆ:327/2008-09

ರಾಜರಾಜೇಶ್ವರಿನಗರ ವಲಯದಲ್ಲಿ ಬರುವ ಮಳೆ ನೀರುಗಾಲುವೆಗೆ ಸಂಬಂಧಿಸಿದಂತೆ, ವಿವರವಾದ ಅಂದಾಜು ಹಾಗೂ ಯೋಜನೆ ತಯಾರಿಸಲು ಸಲಹೆಗಾರರನ್ನು ನೇಮಿಸುವ ಬಗ್ಗೆ.

**ಪ್ರಸ್ತಾವನೆ:**

ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯಲ್ಲಿನ 145 ಕಿ.ಮೀ. ಮಳೆನೀರುಗಾಲುವೆಗಳ ಅಭಿವೃದ್ಧಿಗೆ ಸಮಗ್ರ ಯೋಜನೆ ತಯಾರಿಸಬೇಕಾಗಿದ್ದು, ಈ ಯೋಜನೆಗೆ ಈ ಕೆಳಕಂಡ ವಿವರಗಳನ್ನು ಸಂಗ್ರಹಿಸಿ ಅಳವಡಿಸಿದ D.P.R.ನ್ನು ತಯಾರಿಸಬೇಕಾಗಿರುತ್ತದೆ.

1) Detail topographic and Geotechnical survey.
2) Assessment of quantity & quality of drainage discharge.
3) Analysis of the existing system.
4) Prevention of sewerage entering drain.
5) Hydraulic & structural design & drawing.
6) Cost estimate & bill of quantities.
7) Technical specification.
8) Cost Benefit analysis.
9) Preparation of D.P.R. in conformity with JNNURM guidelines.
10) Project appraisal to State & Central Government and get approval.
11) Bid Document.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಡಿಯಲ್ಲಿ ಹೊಸದಾಗಿ ಸೇರಿರುವ ರಾಜರಾಜೇಶ್ವರಿನಗರ ವಲಯಕ್ಕೆ ಸಂಬಂಧಿಸಿದಂತೆ ಮಳೆನೀರುಗಾಲುವೆಯ ನವೀಕರಣ ಯೋಜನೆಯನ್ನು ತಯಾರಿಸಲು ಮಾನ್ಯ ಆಯುಕ್ತರವರು ಆದೇಶಿಸಿದ್ದು, ಅದರಂತೆ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಕೆಳಕಂಡ ಗುತ್ತಿಗೆದಾರರು (ಸಲಹೆಗಾರರು) ಭಾಗವಹಿಸಿರುತ್ತಾರೆ.

1) M/S Stup Consultant Pvt.Ltd. Bangalore.
2) M/S Preethi Consultant Bangalore.

ಇಬ್ಬರು ಸಲಹೆಗಾರರ ತಾಂತ್ರಿಕ ಬಿಡ್ಡ್‌ಗಳನ್ನು ತೆರೆಯಲಾಗಿ, ತಾಂತ್ರಿಕ ಬಿಡ್ಡ್‌ನಲ್ಲಿ M/S Stup Consultant ರವರು ಅರ್ಹರಾಗಿರುತ್ತಾರೆ. ಇವರ ಆರ್ಥಿಕ ಬಿಡ್ಡ್ ಅನ್ನು ಮುಖ್ಯ ಅಭಿಯಂತರರ ಅನುಮೋದನೆ ಪಡೆದು ತೆರೆಯಲಾಗಿ ವಿವರಗಳು ಕೆಳಕಂಡಂತಿವೆ;

| ಕ್ರ.ಸಂ. | ಗುತ್ತಿಗೆದಾರರ ಹೆಸರು | ಯೋಜನೆಯಲ್ಲಿ ನಮೂದಿಸಿರುವ ಮೊತ್ತ ರೂ.ಕೋಟಿಯಲ್ಲಿ | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ.ಕೋಟಿಯಲ್ಲಿ |
|---|---|---|---|
| 1 | M/S Stup Consultant | 377.00 | 2.64 |

. . . 2

M/S Stup Consultant ರವರು ನಮೂದಿಸಿರುವ ಮೊತ್ತ ಹೆಚ್ಚಾದುದ್ದರಿಂದ, ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿ, ಗುತ್ತಿಗೆದಾರರು ಸಂಧಾನದ ನಂತರ ಕೆಳಕಂಡಂತೆ ನಮೂದಿಸಿರುತ್ತಾರೆ.

| ಕ್ರಸಂ | ಗುತ್ತಿಗೆದಾರರ ಹೆಸರು | ಯೋಜನೆಯು ನಮೂದಿಸಿರುವ ಮೊತ್ತ ರೂ ಕೋಟಿಯಲ್ಲಿ | ಗುತ್ತಿಗೆದಾರರು ನಮೂದಿಸಿರುವ ರೂ.ಕೋಟಿಯಲ್ಲಿ | ಸಂಧಾನಿಸಿದ ಮೊತ್ತ ರೂ.ಕೋಟಿಯಲ್ಲಿ | ಶೇಕಡ |
|---|---|---|---|---|---|
| 1 | M/S Stup Consultant | 377.00 | 2.64 | 2.52 | 0.67% |

ಮೇಲಿನ ಅಂಶ ಪರಿಶೀಲಿಸಿಲಾಗಿ, ಗುತ್ತಿಗೆದಾರರು ಸಂಧಾನದ ನಂತರ ನಮೂದಿಸಿರುವ ಒಟ್ಟು ರೂ.2,52,92,472.00 ಗಳನ್ನು ಅಂದಾಜು ಮೊತ್ತ ರೂ. 377.00 ಕೋಟಿಗಳಿಗೆ ತುಲನೆ ಮಾಡಿದಾಗ ಶೇಕಡ 0.67% ರಷ್ಟು ಕಡಿಮೆ ಆಗಿರುವುದು.

ರಾಜರಾಜೇಶ್ವರಿನಗರದ ವಲಯವು ಪಾಲಿಕೆಗೆ ಹೊಸದಾಗಿ ಸೇರಿರುವುದರಿಂದ ಈ ವಲಯದ ಮಳೆನೀರುಗಾಲುವೆಗಳ ಅಭಿವೃದ್ಧಿ ಶೀಘ್ರವಾಗಿ ಆಗಬೇಕಾಗಿರುವುದರಿಂದ ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ.

1. ಸಲಹೆಗಾರರ ವಿವರವಾದ ಯೋಜನೆ ತಯಾರಿಸಲು D.P.R ಒಪ್ಪಿಗೆ
2. ಗುತ್ತಿಗೆದಾರ ಸಂಸ್ಥೆಯವರು ಸಲ್ಲಿಸಿರುವ ರೂ.2.52 ಕೋಟಿಗೆ ಮೊತ್ತಕ್ಕೆ ಒಪ್ಪಿಗೆ.
3. ಸದರಿ ಯೋಜನೆಯನ್ನು State empower Committee ಯ JNNURM ಅಡಿಯಲ್ಲಿ ಮಂಡಿಸಲು ಹಾಗೂ ಈ ಯೋಜನೆಯನ್ನು ಭಾರತ ಸರ್ಕಾರಕ್ಕೆ ಸಲ್ಲಿಸಲು ಒಪ್ಪಿಗೆ.

ಮೇಲಿನ ಅಂಶಗಳಿಗೆ ಅನುಮೋದನೆ ಕೋರಿ ಪರಿಶೀಲಿಸುವ ಸಲುವಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:10/07/2008 ರ ಟಿಪ್ಪಣಿ.

<u>ತೀರ್ಮಾನ:</u> ಆಯುಕ್ತರವರ ದಿನಾಂಕ:10/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:24/07/2008 ರ ನಡವಳಿಗಳು**

**ವಿಷಯದ ಸಂಖ್ಯೆ:356/2008-09**

ವಿಧಾನ ಸೌಧದ ಸುತ್ತ ಹಾಗೂ ಹತ್ತಿರದಲ್ಲಿ ಪಾದಚಾರಿ ಸುರಂಗ ಮಾರ್ಗ ನಿರ್ಮಿಸಲು ಆರ್.ಸಿ.ಸಿ ಪ್ರಿಕ್ಯಾಸ್ಟ್ ಬಾಕ್ಸ್‌ಗಳನ್ನು ಸರಬರಾಜು ಮಾಡುವ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿಧಾನ ಸೌಧದ ಹತ್ತಿರ ಪಾದಚಾರಿಗಳು ರಸ್ತೆಗಳನ್ನು ದಾಟಲು ಸುರಂಗ ಮಾರ್ಗ ನಿರ್ಮಿಸಲು ಪ್ರಿಕ್ಯಾಸ್ಟ್ ಆರ್.ಸಿ.ಸಿ. ಬಾಕ್ಸ್‌ಗಳ ತಾಂತ್ರಿಕತೆಯನ್ನು ಅಳವಡಿಸಿಕೊಂಡು 3.0mX3.0mX1.0m ಅಳತೆಯ ಆರ್.ಸಿ.ಸಿ. ಬಾಕ್ಸ್‌ಗಳನ್ನು ಸರಬರಾಜು ಮಾಡಲು ಅಂದಾಜು ಪಟ್ಟಿಯನ್ನು ರೂ.94.00 ಲಕ್ಷಗಳಿಗೆ ತಯಾರಿಸಲಾಗಿದೆ.

ಸದರಿ ಕಾಮಗಾರಿಯನ್ನು ತೆಗೆದುಕೊಳ್ಳಲು ಅಂದಾಜು ಪಟ್ಟಿಯನ್ನು ಡೇಟಾ ರೇಟ್ ದರ ಪಟ್ಟಿಯಂತೆ ತಯಾರಿಸಿ ಅನುಮೋದನೆಗಾಗಿ ಕೋರಲಾಗಿದೆ. ಅಂದಾಜು ಪಟ್ಟಿಯನ್ನು ರೂ.94.00 ಲಕ್ಷಗಳಿಗೆ ತಯಾರಿಸಲಾಗಿದೆ. ಈ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:16/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:24/07/208 ರ ನಡವಳಿಗಳು**

**ವಿಷಯದ ಸಂಖ್ಯೆ:357/2008-09**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬೊಮ್ಮನಹಳ್ಳಿ ವಲಯದ ಅಂಬಲಿಪುರ ಕೆರೆಯ ಹಂತ-1ರ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬೊಮ್ಮನಹಳ್ಳಿ ವಲಯದ ಅಂಬಲಿಪುರ ಕೆರೆಯ ಹಂತ-1ರ ಅಭಿವೃದ್ಧಿ ಕಾಮಗಾರಿಗಳ ಅಂದಾಜು ಪಟ್ಟಿಯನ್ನು ಮಾನ್ಯ ಆಯುಕ್ತರವರ ಆದೇಶದಂತೆ 2007-08 ನೇ ಸಾಲಿನ ದರ ಪಟ್ಟಿಯಂತೆ ರೂ.86.48 ಲಕ್ಷಗಳಿಗೆ ತಯಾರಿಸಿದ್ದು, ಆಡಳಿತಾತ್ಮಕ ಅನುಮೋದನೆ ಹಾಗೂ ಕಾಮಗಾರಿ ಸಂಕೇತ ಕೋರಿ ಮುಖ್ಯ ಅಭಿಯಂತರರು (ಯೋಜನೆ-2) ರವರು ಪ್ರಸ್ತಾವನೆ ಮಂಡಿಸಿದ್ದು, ವಿವರಗಳು ಕೆಳಕಂಡಂತಿವೆ.

| ಕ್ರಮ ಸಂಖ್ಯೆ | ವಿವರ | ಅಂದಾಜು ಮೊತ್ತ |
|---|---|---|
| 1 | ಪೊದೆಗಳನ್ನು ತೆಗೆಯುವುದು | 55388.00 |
| 2 | ಹೂಳನ್ನು ತೆಗೆಯುವುದು | 643123.00 |
| 3 | ಮಣ್ಣಿನ ಏರಿ ಸಂವರ್ಧನೆ | 1044729.00 |
| 4 | ಕಾಲುದಾರಿ | 2890987.00 |
| 5 | ಸೆಡಿಮೆಂಟೇಷನ್ ಫಿಲ್ಟರ್ | 34373.00 |
| 6 | ವೇಸ್ಟ್ ವಿಯರ್ | 3042778.00 |
| 7 | ಬಯೋಟ್ರೀಟ್‌ಮೆಂಟ್ ಸಿಸ್ಟಮ್ (ವೆಟ್ ಲ್ಯಾಂಡ್) | 786948.00 |
| 8 | ಇತರೆ ಮತ್ತು ಪೂರ್ಣಾಂಕ | 149674.00 |
| | **ಒಟ್ಟು. ರೂ.** | 8648000.00 |

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸದರಿ ಕಾಮಗಾರಿಯ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:15/07/2008ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:15/07/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:24/07/2008 ರ ನಡವಳಿಗಳು

**ವಿಷಯದ ಸಂಖ್ಯೆ:358/2008-09**

Asphalting the Kammagondanahalli, Kala Talkies Main Road, Dasarahalli Sub-Division ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Asphalting the Kammagondanahalli, Kala Talkies Main Road, Dasarahalli Sub-Division ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ ವಲಯ) ರವರು ಮೊದಲನೇ ಕರೆಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 ಟೆಂಡರ್‌ಗಳು ಸ್ವೀಕೃತವಾಗಿದ್ದು, 02 (ಎರಡು) ಟೆಂಡರ್‌ದಾರರ ತಾಂತ್ರಿಕ ಬಿಡ್ ಸಿಂಧುವಾಗಿರುತ್ತವೆ. ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ ವಲಯ) ರವರು ಕನಿಷ್ಠ ಟೆಂಡರ್‌ದಾರ ಸಂಸ್ಥೆಯಾದ ಮೆ॥ ನಿರ್ಮಾಣ್ ಇಂಜಿನಿಯರ್ಸ್ ಮತ್ತು ಕಂಟ್ರಾಕ್ಟರ್ಸ್, ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.49.00 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2007-08ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರು (ದಾಸರಹಳ್ಳಿ) ವಲಯ ರವರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಿದ್ದು, ಟೆಂಡರ್‌ಗಿಟ್ಟ ಮೊಬಲಗು ರೂ.48,98,966.00 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರ ಸಂಸ್ಥೆಯಾದ ಮೆ॥ ನಿರ್ಮಾಣ್ ಇಂಜಿನಿಯರ್ಸ್ ಮತ್ತು ಕಂಟ್ರಾಕ್ಟರ್ಸ್, ರವರು ಶೇಕಡ 28.95% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿದ್ದು, ಕನಿಷ್ಠ ಟೆಂಡರ್‌ದಾರರಾಗಿರುತ್ತಾರೆ. ನಮೂದಿಸಿದ ದರಗಳು ಹೆಚ್ಚಿನದಾಗಿದ್ದರಿಂದ ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ ವಲಯ) ರವರು ಗುತ್ತಿಗೆದಾರರೊಡನೆ ಸಂಧಾನ ನಡೆಸಿ, ನಮೂದಿಸಿದ ದರಗಳಾದ ಶೇಕಡ 28.95% ರಷ್ಟು ಹೆಚ್ಚುವರಿ ದರಗಳು ಸಮಪರ್ಕವಾಗಿದ್ದು ಕಡಿಮೆ ಮಾಡಲು ಸಾಧ್ಯವಿಲ್ಲವೆಂದು ಸಂಧಾನ ಪತ್ರ ನೀಡಿದ್ದು, ನಮೂದಿಸಿದ ದರಗಳಲ್ಲೇ ಕಾಮಗಾರಿಯನ್ನು ನಿರ್ಮಾಣ ಮಾಡಲು ಒಪ್ಪಿಗೆ ನೀಡಿರುತ್ತಾರೆ. ಗುತ್ತಿಗೆದಾರರು ನಮೂದಿಸಿರುವ ದರಗಳನ್ನು ತುಲನೆ ಮಾಡಿ ಪ್ರಸಕ್ತ ಸಾಲಿನ ದರಪಟ್ಟಿಗೆ (2007-08) ಹೋಲಿಸಿದಾಗ ಶೇಕಡ 13.36% ರಷ್ಟು ಹೆಚ್ಚಿನ ದರಗಳು ಕಂಡು ಬಂದಿರುತ್ತದೆ. ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು (ದಾಸರಹಳ್ಳಿ ವಲಯ) ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತ (ಟೆಂಡರ್ ಪ್ರೀಮಿಯಂ ಸೇರಿ) ರೂ.63,17,464.00 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ/116/ಎಹೆಚ್‌ಡಿ/2002, ದಿನಾಂಕ:24/01/2003 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ, ನಿಯಮಗಳು 1977 ನಿಯಮ 6ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಯುಕ್ತರು/ಆಡಳಿತಗಾರ ರವರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರ ಸಂಸ್ಥೆಯಾದ ಮೆ॥ ನಿರ್ಮಾಣ್ ಇಂಜಿನಿಯರ್ಸ್ ಮತ್ತು ಕಂಟ್ರಾಕ್ಟರ್ಸ್, ರವರು 2007-08ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಸಂಧಾನದ ನಂತರ ನಮೂದಿಸಿದ ದರಗಳಿಗೆ ಬಿಟುಮಿನ್ ವ್ಯತ್ಯಾಸದ ದರಗಳನ್ನು ಪರಿಗಣಿಸಿ ಬಂದಂತಹ ಶೇಕಡ 13.36% ರಷ್ಟು ಹೆಚ್ಚುವರಿ ದರಗಳು ಅಥವಾ ರೂ.63,17,464.00 (ರೂ. ಅರವತ್ತ್ಮೂರು ಲಕ್ಷದ ಹದಿನೇಳು ಸಾವಿರದ ನಾಲ್ಕು ನೂರ ಅರವತ್ತ್ನಾಲ್ಕು ಮಾತ್ರ) ಗಳ ಟೆಂಡರ್ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:21/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:21/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:24/07/2008 ರ ನಡವಳಿಗಳು**

**ವಿಷಯದ ಸಂಖ್ಯೆ:359/2008-09**

Asphalting the Dasarahalli Main and Cross Roads, Dasarahalli Sub-Division ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Asphalting the Dasarahalli Main and Cross Roads, Dasarahalli Sub-Division ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ವಲಯ ರವರು ಮೊದಲನೇ ಕರೆಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 ಟೆಂಡರ್‌ಗಳು ಸ್ವೀಕೃತವಾಗಿದ್ದು, 02 (ಎರಡು) ಟೆಂಡರ್‌ದಾರರ ತಾಂತ್ರಿಕ ಬಿಡ್ ಸಿಂಧುವಾಗಿರುತ್ತವೆ. ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ವಲಯ ರವರು ಕನಿಷ್ಠ ಟೆಂಡರ್‌ದಾರ ಸಂಸ್ಥೆಯಾದ ಮೆ॥ ನಿರ್ಮಾಣ್ ಇಂಜಿನಿಯರ್ಸ್ ಮತ್ತು ಕಂಟ್ರಾಕ್ಟರ್ಸ್, ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.50.00 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2007-08ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರು (ದಾಸರಹಳ್ಳಿ) ವಲಯ ರವರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಿದ್ದು, ಟೆಂಡರ್ ಕರೆದಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು ರೂ.49,98,456.00 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರ ಸಂಸ್ಥೆಯಾದ ಮೆ॥ ನಿರ್ಮಾಣ್ ಇಂಜಿನಿಯರ್ಸ್ ಮತ್ತು ಕಂಟ್ರಾಕ್ಟರ್ಸ್, ರವರು ಶೇಕಡ 27.31% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿದ್ದು, ಕನಿಷ್ಠ ಟೆಂಡರ್‌ದಾರರಾಗಿರುತ್ತಾರೆ. ನಮೂದಿಸಿದ ದರಗಳು ಹೆಚ್ಚಿನದಾಗಿದ್ದರಿಂದ ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ವಲಯ ರವರು ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ, ಗುತ್ತಿಗೆದಾರರು ಸಂಧಾನದ ನಡೆಸಿ, ನಮೂದಿಸಿದ ದರಗಳಾದ ಶೇಕಡ 27.31% ರಷ್ಟು ಹೆಚ್ಚುವರಿ ದರಗಳು ಸಮಪರ್ಕವಾಗಿದ್ದು ಕಡಿಮೆ ಮಾಡಲು ಸಾಧ್ಯವಿಲ್ಲವೆಂದು ಸಂಧಾನ ಪತ್ರ ನೀಡಿದ್ದು, ನಮೂದಿಸಿದ ದರಗಳಲ್ಲೇ ಕಾಮಗಾರಿಯನ್ನು ನಿರ್ಮಾಣ ಮಡಲು ಒಪ್ಪಿಗೆ ನೀಡಿರುತ್ತಾರೆ. ಗುತ್ತಿಗೆದಾರರು ನಮೂದಿಸಿದ ದರಗಳನ್ನು ತುಲನೆ ಮಾಡಿ ಪ್ರಸಕ್ತ ಸಾಲಿನ ದರಪಟ್ಟಿಗೆ (2007-08) ಹೋಲಿಸಿದಾಗ ಶೇಕಡ 14.96% ರಷ್ಟು ಹೆಚ್ಚಿನ ದರಗಳು ಕಂಡು ಬಂದಿರುತ್ತದೆ. ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು (ದಾಸರಹಳ್ಳಿ) ವಲಯ ರವರು ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತ (ಟೆಂಡರ್ ಪ್ರೀಮಿಯಂ ಸೇರಿ) ರೂ.63,63,641.00 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ/116/ಎಹೆಚ್‌ಡಿ/2002, ದಿನಾಂಕ:24/01/2003 ರಲ್ಲಿ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ, ನಿಯಮಗಳು 1977 ನಿಯಮ 6ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಯುಕ್ತರು/ಆಡಳಿತಗಾರರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರ ಸಂಸ್ಥೆಯಾದ ಮೆ॥ ನಿರ್ಮಾಣ್ ಇಂಜಿನಿಯರ್ಸ್ ಮತ್ತು ಕಂಟ್ರಾಕ್ಟರ್ಸ್, ರವರು 2007-08ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಸಂಧಾನದ ನಂತರ ನಮೂದಿಸಿದ ದರಗಳಿಗೆ ಬಿಟುಮಿನ್ ವ್ಯತ್ಯಾಸದ ದರಗಳನ್ನು ಪರಿಗಣಿಸಿ ಬಂದಂತಹ ಶೇಕಡ 14.96% ರಷ್ಟು ಹೆಚ್ಚುವರಿ ದರಗಳು ಅಥವಾ ರೂ.63,63,641.00 (ರೂ. ಅರವತ್ತಮೂರು ಲಕ್ಷದ ಅರವತ್ತಮೂರು ಸಾವಿರದ ಆರು ನೂರ ನಲವತ್ತೊಂದು ಮಾತ್ರ) ಗಳ ಟೆಂಡರ್ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:22/07/2008 ರ ಟಿಪ್ಪಣಿ.

**ನಿರ್ಣಯ:** ಆಯುಕ್ತರವರ ದಿನಾಂಕ:22/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:24/07/2008ರ ನಡವಳಿಗಳು**

**ವಿಷಯದ ಸಂಖ್ಯೆ:360/2008-09**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೌರ ಕಾರ್ಮಿಕರು, ಗ್ಯಾಂಗ್‌ಮೆನ್ ಮತ್ತು ನಾಲ್ಕನೇ ದರ್ಜೆ ನೌಕರರ ಮಕ್ಕಳಿಗೆ ಪ್ರೋತ್ಸಾಹ ಧನ ನೀಡುವ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೌರ ಕಾರ್ಮಿಕರು, ಗ್ಯಾಂಗ್‌ಮೆನ್ ಮತ್ತು ನಾಲ್ಕನೇ ದರ್ಜೆ ನೌಕರರ ವಾರ್ಷಿಕ ಆದಾಯ ರೂ.1.00 ಲಕ್ಷದೊಳಗೆ ಇರುವವರ ಮಕ್ಕಳಿಗೆ, ವೃತ್ತಿ ಶಿಕ್ಷಣ ಹಾಗೂ ಉನ್ನತ ವ್ಯಾಸಂಗ ಮಾಡುವವರಿಗೆ ಪ್ರೋತ್ಸಾಹ ಧನ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸದರಿ ಯೋಜನೆಯಡಿಯಲ್ಲಿ ಗ್ರೂಫ್ 'ಡಿ' ನೌಕರರ ಮಕ್ಕಳು ಪಿ.ಯು.ಸಿ ನಂತರ ಬಯೋ ಟೆಕ್ನಾಲಜಿ, ಎಂ.ಬಿ.ಬಿ.ಎಸ್/ಬಿ.ಡಿ.ಎಸ್., ಬಿ.ಇ., ಬಿ.ಎಸ್.ಸಿ. ಅಗ್ರಿಕಲ್ಚರ್ ಇತ್ಯಾದಿ ಒಟ್ಟು 27 ಪದವಿ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿದ್ದಲ್ಲಿ ಪಾಲಿಕೆವತಿಯಿಂದ ಪ್ರೋತ್ಸಾಹ ಧನ ನೀಡಲು ಪ್ರಸ್ತಾವನೆಯನ್ನು ದಿನಾಂಕ:16/05/2007 ರಂದು ಮಾನ್ಯ ಆಡಳಿತಗಾರರಿಗೆ ಸಲ್ಲಿಸಲಾಗಿ, ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ:83/07-08 ರಲ್ಲಿ ದಿನಾಂಕ:07/07/2007 ರಂದು ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ, ಪ್ರಸ್ತಾವನೆಯಲ್ಲಿನ 27 ಪದವಿ ಕೋರ್ಸ್‌ಗಳೊಂದಿಗೆ I.T.I. Course, Nursing Course, Physiotherapy, Pathology Laboratory Assistant, X-ray Technician Opthalmologist (Refractionist) Technician Courses ಗಳನ್ನು ಅಳವಡಿಸಿಕೊಳ್ಳಲು ಅನುಮೋದನೆ ನೀಡಿರುತ್ತಾರೆ.

2007-08ನೇ ಸಾಲಿನಲ್ಲಿ 5ನೇ ವೇತನ ಆಯೋಗದ, ಸರ್ಕಾರದ ಆದೇಶದನ್ವಯ, ನೌಕರರ ಮೂಲ ವೇತನ ರೂ.2500-4800, ರೂ.2600-5200 ಮತ್ತು ರೂ.2775-5500 ಗಳಿಗೆ ಪರಿಷ್ಕರಣೆಯಗಿದ್ದು, ಪೌರ ಕಾರ್ಮಿಕರು ಹಾಗೂ 4ನೇ ದರ್ಜೆ ನೌಕರರ ವೇತನವು ಸಹ ಹೆಚ್ಚಾಗಿರುವ ಹಿನ್ನೆಲೆಯಲ್ಲಿ, ಈ ಹಿಂದೆ ವಾರ್ಷಿಕ ಆದಾಯ ರೂ.1.00 ಲಕ್ಷದೊಳಗೆ ಇದ್ದ ನೌಕರರ ಮಕ್ಕಳು ಯೋಜನೆಯ ಸದುಪಯೋಗ ಪಡೆಯಲು ಅರ್ಹರಾಗಿದ್ದರು. ಪ್ರಸಕ್ತ ವೇತನ ಹೆಚ್ಚಳದಿಂದ ವಾರ್ಷಿಕ ಆದಾಯ ರೂ.1.50 ಲಕ್ಷದೊಳಗೆ ಇರುವ ನೌಕರರ ಮಕ್ಕಳು ಸಹ ಯೋಜನೆಯ ಪ್ರಯೋಜನ ಪಡೆಯಲು ಅರ್ಹರಾಗಿರುತ್ತಾರೆಂಬುದನ್ನು ಮಾನ್ಯ ಆಡಳಿತಗಾರರಿಗೆ ಮಂಡಿಸಲಾಗಿತ್ತು. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಮಾನ್ಯ ಆಡಳಿತಗಾರರು ದಿನಾಂಕ:20/12/2007 ರಂದು ವಿಷಯದ ಸಂಖ್ಯೆ:290/2007-08 ರಲ್ಲಿ ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ, ತರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅಧಿಕಾರವನ್ನು ಚಲಾಯಿಸಿ ಅನುಮೋದನೆ ನೀಡಿರುತ್ತಾರೆ.

ಶ್ರೀ.ಓಬಳೇಶ್, ಪೌರಕಾರ್ಮಿಕರು, ಆರೋಗ್ಯ ವೈದ್ಯಾಧಿಕಾರಿಗಳು (ಬಸವನಗುಡಿ) ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇವರು, ದಿನಾಂಕ:23/06/2008 ರಂದು ಮಾನ್ಯ ವಿಶೇಷ ಆಯುಕ್ತರು (ಆಡಳಿತ) ಇವರಿಗೆ ಮನವಿ ಸಲ್ಲಿಸಿ, ಸದರಿಯವರ ಮಗಳಾದ ಕು॥ ಮೀನಾಕುಮಾರಿ ರವರು ಸ್ವೀಡನ್ ಸ್ಕೂಲ್ ಆಫ್ ಬಿಸಿನೆಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು ಇಲ್ಲಿ 2007-08ನೇ ಸಾಲಿನಲ್ಲಿ (2 ವರ್ಷದ ಅವಧಿ) ಎಂ.ಬಿ.ಎ. ಪದವಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, ಸದರಿ ಪದವಿಗೆ ಸುಮಾರು ರೂ.2.50 ಲಕ್ಷಗಳು ವೆಚ್ಚವಾಗುವುದಾಗಿ ತಿಳಿಸಿ, ಎಂ.ಬಿ.ಎ. ಪದವಿಯನ್ನು ಸಹ ಸದರಿ ಯೋಜನೆಯಲ್ಲಿ ಪರಿಗಣಿಸಿ ಪ್ರೋತ್ಸಾಹ ಧನವನ್ನು ಮಂಜೂರು

. . . 2

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



ಮಾಡಲು ಕೋರಿರುತ್ತಾರೆ. ಸದರಿಯವರ ಮನವಿಯನ್ನು ಪರಿಶೀಲಿಸಲಾಗಿ, ಈ ಹಿಂದೆ ಪ್ರೋತ್ಸಾಹ ಧನ ನೀಡಲು ಅನುಮೋದನೆಯಾಗಿರುವ ಕೋರ್ಸ್‌ಗಳಲ್ಲಿ ಎಂ.ಬಿ.ಎ., ಎಂ.ಎಸ್.ಡಬ್ಲ್ಯೂ. ಪದವಿಯನ್ನು ಪರಿಗಣಿಸಲಾಗಿರುವುದಿಲ್ಲ. ಆದರೆ ಎಂ.ಬಿ.ಎ., ಎಂ.ಎಸ್.ಡಬ್ಲ್ಯೂ ಪದವಿಯೂ ಸಹ ಸ್ನಾತಕೋತ್ತರ ಪದವಿಯಾಗಿರುವುದರಿಂದ ಈ ಪದವಿಯನ್ನು ಸಹ ಸದರಿ ಯೋಜನೆಯಡಿ ಪ್ರೋತ್ಸಾಹ ಧನ ನೀಡಲು ಪರಿಗಣಿಸುವುದು ಸೂಕ್ತವೆಂದು ಅಭಿಪ್ರಾಯಿಸಿದೆ.

ಈ ಹಿನ್ನೆಲೆಯಲ್ಲಿ, ಈ ಹಿಂದೆ ಅನುಮೋದಿಸಲ್ಪಟ್ಟಿರುವ ಸುಮಾರು 33 ಪದವಿ ಕೋರ್ಸ್‌ಗಳ ಜೊತೆಗೆ ಎಂ.ಬಿ.ಎ. ಹಾಗೂ ಎಂ.ಎಸ್.ಡಬ್ಲ್ಯೂ ಪದವಿಯನ್ನು ಸಹ ಪರಿಗಣಿಸಿ, ಪ್ರೋತ್ಸಾಹ ಧನ ಮಂಜೂರು ಮಾಡುವ ಬಗ್ಗೆ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:21/07/2008 ರ ಟಿಪ್ಪಣಿ.

ತೀರ್ಮಾನ: ಆಯುಕ್ತರವರ ದಿನಾಂಕ:21/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ತೋಟಗಾರಿಕೆ ಮತ್ತು ಮಾರುಕಟ್ಟೆ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:24/07/2008ರ ನಡವಳಿಗಳು**

**ವಿಷಯದ ಸಂಖ್ಯೆ:361/2008-09**

ಸುಭಾಷ್ ಚಂದ್ರ ಭೋಸ್ (ಪಿ.ಯು.ಬಿ) ಕಟ್ಟಡದಲ್ಲಿನ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ ರವರ ಬಾಡಿಗೆ ಬಾಕಿ ಪಾವತಿ ಬಗ್ಗೆ.

**ಪ್ರಸ್ತಾವನೆ:**

ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಪಾಲಿಕೆಯ ಸುಭಾಷ್ ಚಂದ್ರ ಭೋಸ್ ಕಟ್ಟಡದ (ಪಿ.ಯು.ಬಿ) 3 ಮತ್ತು 4ನೇ ಮಹಡಿಯ ಪರವಾನಗಿದಾರರಾಗಿರುವ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ ರವರು ಮಾನ್ಯ ಆಡಳಿತಗಾರರಿಗೆ ದಿನಾಂಕ:02/11/2007 ರಂದು ಒಂದು ಪತ್ರವನ್ನು ನೀಡಿ ದಿನಾಂಕ:02/07/2007 ರ ವಿಷಯದ ಸಂಖ್ಯೆ:23/2007-2008 ರ ನಡವಳಿಯಂತೆ ಪರವಾನಗಿ ಶುಲ್ಕವನ್ನು ಹೆಚ್ಚಿಸಿರುವುದನ್ನು ತಮ್ಮ ಸಂಸ್ಥೆಯು ಪಾವತಿ ಮಾಡಲು ಕಷ್ಟವಾಗುತ್ತದೆ. ಈಗಾಗಲೇ ಸಂಸ್ಥೆಯು ಆರ್ಥಿಕ ಮುಗ್ಗಟ್ಟಿನಲ್ಲಿ ಇದ್ದು ಸಂಸ್ಥೆಯ ನೌಕರರಿಗೆ ಸಂಬಳವನ್ನು ನೀಡಲ್ಲವೆಂದು ತಿಳಿಸಿ ಆಗಸ್ಟ್-2000 ದಿಂದ 30/03/2006 ರ ವರೆವಿಗೂ ಬಾಕಿ ಇರುವ ಮೊತ್ತ ಸುಮಾರು 36.35 ಲಕ್ಷ ರೂ.ಗಳನ್ನು ಮನ್ನಾ ಮಾಡಬೇಕೆಂದು ಕೋರಿರುತ್ತಾರೆ.

ಈ ಮನವಿಯ ಬಗ್ಗೆ ಮುಖ್ಯ ಲೆಕ್ಕ ಪರಿಶೋಧಕರ ಅಭಿಪ್ರಾಯ ಕೇಳಲಾಗಿ ಸದರಿಯವರು ಕಾನೂನಿನ್ವಯ ಈ ಮೊತ್ತವನ್ನು ಮನ್ನ ಮಾಡಲು ಬರುವುದಿಲ್ಲ ಎಂಬ ಅಭಿಪ್ರಾಯ ನೀಡಿರುವುದನ್ನು ಮನಗಂಡು ವಿಶೇಷ ಆಯುಕ್ತರು (ಹಣಕಾಸು ಮತ್ತು ಸಂಪನ್ಮೂಲ) ರವರು ಈ ಮೊತ್ತಕ್ಕೆ ಶೇಕಡ 9 ರಷ್ಟು ವಾರ್ಷಿಕ ಬಡ್ಡಿಯೊಂದಿಗೆ ನಾಲ್ಕು (4) ಸಮ ಕಂತುಗಳಲ್ಲಿ ಪಾವತಿ ಮಾಡಲು ಒಪ್ಪಬಹುದಾಗಿದೆ. ಬಾಕಿ ಬಾಡಿಗೆಯನ್ನು ಕಂತಿನಲ್ಲಿ ಪಾವತಿಸುವ ಪೂರ್ವದಲ್ಲಿ ಸದರಿ ಸಂಸ್ಥೆಯು 2008-09ನೇ ಸಾಲಿನ ಬಾಕಿ ಬಾಡಿಗೆಯನ್ನು ಸಂಪೂರ್ಣವಾಗಿ ಪಾವತಿಸತಕ್ಕದ್ದು ಎಂಬ ನಿಬಂಧನೆಯನ್ನು ವಿಧಿಸಿ ಬಾಕಿ ಬಾಡಿಗೆಯನ್ನು ವಸೂಲಿ ಮಾಡಲು ಮಾನ್ಯ ಆಡಳಿತಗಾರರು ತೀರ್ಮಾನಿಸಿದಲ್ಲಿ ಅವಕಾಶ ಕಲ್ಪಿಸಬಹುದೆಂದು ಹೇಳಿರುವ ಪ್ರಯುಕ್ತ ಈ ಮೇಲ್ಕಂಡ ವಿಷಯದ ಬಗ್ಗೆ ಅವಕಾಶ ಕಲ್ಪಿಸಿ ತೀರ್ಮಾನ ಕೈಗೊಳ್ಳಲು ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:21/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:21/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

ತೋಟಗಾರಿಕೆ ಮತ್ತು ಮಾರುಕಟ್ಟೆ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:24/07/2008ರ ನಡವಳಿಗಳು

**ವಿಷಯದ ಸಂಖ್ಯೆ:361/2008-09**

ಸುಭಾಷ್ ಚಂದ್ರ ಭೋಸ್ (ಪಿ.ಯು.ಬಿ) ಕಟ್ಟಡದಲ್ಲಿನ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ ರವರ ಬಾಡಿಗೆ ಬಾಕಿ ಪಾವತಿ ಬಗ್ಗೆ.

**ಪ್ರಸ್ತಾವನೆ:**

ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಪಾಲಿಕೆಯ ಸುಭಾಷ್ ಚಂದ್ರ ಭೋಸ್ ಕಟ್ಟಡದ (ಪಿ.ಯು.ಬಿ) 3 ಮತ್ತು 4ನೇ ಮಹಡಿಯ ಪರವಾನಗಿದಾರರಾಗಿರುವ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ ರವರು ಮಾನ್ಯ ಆಡಳಿತಗಾರರಿಗೆ ದಿನಾಂಕ:02/11/2007 ರಂದು ಒಂದು ಪತ್ರವನ್ನು ನೀಡಿ ದಿನಾಂಕ:02/07/2007 ರ ವಿಷಯದ ಸಂಖ್ಯೆ:23/2007-2008 ರ ನಡವಳಿಯಂತೆ ಪರವಾನಗಿ ಶುಲ್ಕವನ್ನು ಹೆಚ್ಚಿಸಿರುವುದನ್ನು ತಮ್ಮ ಸಂಸ್ಥೆಯು ಪಾವತಿ ಮಾಡಲು ಕಷ್ಟವಾಗುತ್ತದೆ. ಈಗಾಗಲೇ ಸಂಸ್ಥೆಯು ಆರ್ಥಿಕ ಮುಗ್ಗಟ್ಟಿನಲ್ಲಿ ಇದ್ದು ಸಂಸ್ಥೆಯ ನೌಕರರಿಗೆ ಸಂಬಳವನ್ನು ನೀಡಲ್ಲವೆಂದು ತಿಳಿಸಿ ಆಗಸ್ಟ್-2000 ದಿಂದ 30/03/2006 ರ ವರೆವಿಗೂ ಬಾಕಿ ಇರುವ ಮೊತ್ತ ಸುಮಾರು 36.35 ಲಕ್ಷ ರೂ.ಗಳನ್ನು ಮನ್ನಾ ಮಾಡಬೇಕೆಂದು ಕೋರಿರುತ್ತಾರೆ.

ಈ ಮನವಿಯ ಬಗ್ಗೆ ಮುಖ್ಯ ಲೆಕ್ಕ ಪರಿಶೋಧಕರ ಅಭಿಪ್ರಾಯ ಕೇಳಲಾಗಿ ಸದರಿಯವರು ಕಾನೂನಿನ್ವಯ ಈ ಮೊತ್ತವನ್ನು ಮನ್ನ ಮಾಡಲು ಬರುವುದಿಲ್ಲ ಎಂಬ ಅಭಿಪ್ರಾಯ ನೀಡಿರುವುದನ್ನು ಮನಗಂಡು ವಿಶೇಷ ಆಯುಕ್ತರು (ಹಣಕಾಸು ಮತ್ತು ಸಂಪನ್ಮೂಲ) ರವರು ಈ ಮೊತ್ತಕ್ಕೆ ಶೇಕಡ 9 ರಷ್ಟು ವಾರ್ಷಿಕ ಬಡ್ಡಿಯೊಂದಿಗೆ ನಾಲ್ಕು (4) ಸಮ ಕಂತುಗಳಲ್ಲಿ ಪಾವತಿ ಮಾಡಲು ಒಪ್ಪಬಹುದಾಗಿದೆ. ಬಾಕಿ ಬಾಡಿಗೆಯನ್ನು ಕಂತಿನಲ್ಲಿ ಪಾವತಿಸುವ ಪೂರ್ವದಲ್ಲಿ ಸದರಿ ಸಂಸ್ಥೆಯು 2008-09ನೇ ಸಾಲಿನ ಬಾಕಿ ಬಾಡಿಗೆಯನ್ನು ಸಂಪೂರ್ಣವಾಗಿ ಪಾವತಿಸತಕ್ಕದ್ದು ಎಂಬ ನಿಬಂಧನೆಯನ್ನು ವಿಧಿಸಿ ಬಾಕಿ ಬಾಡಿಗೆಯನ್ನು ವಸೂಲಿ ಮಾಡಲು ಮಾನ್ಯ ಆಡಳಿತಗಾರರು ತೀರ್ಮಾನಿಸಿದಲ್ಲಿ ಅವಕಾಶ ಕಲ್ಪಿಸಬಹುದೆಂದು ಹೇಳಿರುವ ಪ್ರಯುಕ್ತ ಈ ಮೇಲ್ಕಂಡ ವಿಷಯದ ಬಗ್ಗೆ ಅವಕಾಶ ಕಲ್ಪಿಸಿ ತೀರ್ಮಾನ ಕೈಗೊಳ್ಳಲು ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:21/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:21/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

ತೋಟಗಾರಿಕೆ ಮತ್ತು ಮಾರುಕಟ್ಟೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:26/07/2008 ರ ನಡವಳಿಗಳು

ವಿಷಯದ ಸಂಖ್ಯೆ:362/2007-08

Land Scape Works for Median from IAF to International Airport Flyover, Bangalore International Airport Road, BBMP.

ಪ್ರಸ್ತಾಪನೆ:

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೀಡಿಯನ್ ನಲ್ಲಿ ಐಎಎಫ್‌ನಿಂದ ವಿಮಾನ ನಿಲ್ದಾಣದ ಪ್ಲೈ ಓವರ್ ವರೆವಿಗೆ ಭೂವಿನ್ಯಾಸ ಹಾಗೂ ಅಭಿವೃದ್ಧಿ ಕೆಲಸಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿದೆ.

ಈ ಹಿನ್ನೆಲೆಯಲ್ಲಿ ರೂ.77.3 ಲಕ್ಷಗಳಿಗೆ ಅಂದಾಜು ಪಟ್ಟಿಗಳನ್ನು ತಯಾರಿಸಿದ್ದು, Construction of pass overs at busy junctions with State Government Grants 2008-09ನೇ ಸಾಲಿನ ಶೀರ್ಷಿಕೆಯಡಿ ನಿಗದಿಪಡಿಸಿರುವ ಅನುದಾನದಲ್ಲಿ ಭರಿಸಲು ಉದ್ದೇಶಿಸಿದೆ ಹಾಗೂ ಕಾಮಗಾರಿ ಸಂಕೇತವನ್ನು ಪಡೆಯಲಾಗಿದ್ದು, ಅದರಂತೆ ಅಭಿವೃದ್ಧಿ ಕೆಲಸಗಳನ್ನು ನಿರ್ವಹಿಸಲಾಗುವುದು. ಸದರಿ ಕಾಮಗಾರಿಯನ್ನು ಪಾರದರ್ಶಕ ಅಧಿನಿಯಮದಂತೆ ಟೆಂಡರ್‌ಗಳನ್ನು ಆಹ್ವಾನಿಸಿ ಕಾಮಗಾರಿಗಳನ್ನು ನಿರ್ವಹಿಸಲಾಗುವುದು.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಐ.ಎ.ಎಫ್ ನಿಂದ ವಿಮಾನ ನಿಲ್ದಾಣದ ಪ್ಲೈ ಓವರ್ ವರೆವಿಗೆ ಭೂವಿನ್ಯಾಸ ಹಾಗೂ ಅಭಿವೃದ್ಧಿ ಕೆಲಸವನ್ನು ಟೆಂಡರ್ ಆಹ್ವಾನಿಸಿ ಅಭಿವೃದ್ಧಿಪಡಿಸಲು ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-07-2008 ರ ಟಿಪ್ಪಣಿ.

ತೀರ್ಮಾನ: ಆಯುಕ್ತರವರ ದಿನಾಂಕ:16-07-2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ತೋಟಗಾರಿ ಮತ್ತು ಮಾರುಕಟ್ಟೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:26/07/2008 ರ ನಡವಳಿಗಳು**

**ವಿಷಯದ ಸಂಖ್ಯೆ:364/08-09**

Sculptures & Arches for median from Hebbal Flyover to International Airport Flyover.

**ಪ್ರಸ್ತಾವನೆ:**

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೀಡಿಯನ್ ನಲ್ಲಿ ಹೆಬ್ಬಾಳ ಫ್ಲೈ ಓವರ್‌ನಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಫ್ಲೈ ಓವರ್‌ವರೆವಿಗೆ ಸ್ಕಪ್ಚರ್ಸ್ ಮತ್ತು ಆರ್ಚಸ್ಸ್ ನಿರ್ಮಾಣ ಮಾಡುವ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿದೆ.

ಈ ಹಿನ್ನೆಲೆಯಲ್ಲಿ ರೂ.58.00 ಲಕ್ಷಗಳಿಗೆ ಅಂದಾಜು ಪಟ್ಟಿಗಳನ್ನು ತಯಾರಿಸಿದ್ದು Construction of Pass overs at busy junctions with State Government Grants 2008-09ನೇ ಸಾಲಿನ ಶೀರ್ಷಿಕೆಯಡಿ ನಿಗದಿಪಡಿಸಿರುವ ಅನುದಾನದಲ್ಲಿ ಭರಿಸಲು ಉದ್ದೇಶಿಸಿದೆ ಹಾಗೂ ಕಾಮಗಾರಿ ಸಂಕೇತವನ್ನು ಪಡೆಯಲಾಗಿದ್ದು ಅದರಂತೆ ಅಭಿವೃದ್ಧಿ ಕೆಲಸಗಳನ್ನು ನಿರ್ವಹಿಸಲಾಗುವುದು. ಸದರಿ ಕಾಮಗಾರಿಗಳನ್ನು ಪಾರದರ್ಶಕ ಅದಿನಿಯಮದಂತೆ ಟೆಂಡರುಗಳನ್ನು ಆಹ್ವಾನಿಸಿ ಕಾಮಗಾರಿಗಳನ್ನು ನಿರ್ವಹಿಸಲಾಗುವುದು.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಹೆಬ್ಬಾಳ ಫ್ಲೈ ಓವರ್ ನಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಫ್ಲೈ ಓವರ್‌ವರೆವಿಗೆ ಸ್ಕಪ್ಚರ್ಸ್ ಮತ್ತು ಆರ್ಚಸ್ಸ್ ನಿರ್ಮಾಣ ಕೆಲಸಳಗಳನ್ನು ಕೈಗೊಳ್ಳಲು ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:16/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ತೋಟಗಾರಿ ಮತ್ತು ಮಾರುಕಟ್ಟೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:26/07/2008 ರ ನಡವಳಿಗಳು**

ವಿಷಯದ ಸಂಖ್ಯೆ: 365/08-09

Drilling Borewells & Sprinkler System Works for median from Hebbal Flyover to International Airport Flyover.

ಪ್ರಸ್ತಾವನೆ:

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೀಡಿಯನ್ ನಲ್ಲಿ ಹೆಬ್ಬಾಳ ಫ್ಲೈ ಓವರ್‌ನಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಫ್ಲೈ ಓವರ್‌ವರೆವಿಗೆ ಕೊಳವೆ ಬಾವಿ ಕೊರೆಯುವುದು ಹಾಗೂ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸುವ ಕೆಲಸಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿದೆ.

ಈ ಹಿನ್ನಲ್ಲೆಯಲ್ಲಿ ರೂ.50.00 ಲಕ್ಷಗಳಿಗೆ ಅಂದಾಜು ಪಟ್ಟಿಗಳನ್ನು ತಯಾರಿಸಿದ್ದು. Construction of Pass overs at busy junctions with State Government Grants, 2008-09ನೇ ಸಾಲಿನ ಲೆಕ್ಕ ಶೀರ್ಷಿಕೆಯಡಿ ನಿಗದಿಪಡಿಸಿರುವ ಅನುದಾನದಲ್ಲಿ ಭರಿಸಲು ಉದ್ದೇಶಿಸಿದೆ ಹಾಗೂ ಕಾಮಗಾರಿ ಸಂಕೇತವನ್ನು ಪಡೆಯಲಾಗಿದ್ದು, ಅದರಂತೆ ಅಭಿವೃದ್ಧಿ ಕೆಲಸಗಳನ್ನು ನಿರ್ವಹಿಸಲಾಗುವುದು. ಸದರಿ ಕಾಮಗಾರಿಗಳನ್ನು ಪಾರದರ್ಶಕ ಅದಿನಿಯಮದಂತೆ ಟೆಂಡರುಗಳನ್ನು ಆಹ್ವಾನಿಸಿ ಕಾಮಗಾರಿಗಳನ್ನು ನಿರ್ವಹಿಸಲಾಗುವುದು.

ಮೇಲ್ಕಂಡ ಆಂಶಗಳ ಹಿನ್ನೆಲೆಯಲ್ಲಿ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಹೆಬ್ಬಾಳ ಫ್ಲೈ ಓವರ್ ನಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಫ್ಲೈ ಓವರ್‌ವರೆವಿಗೆ ಕೊಳವೆ ಬಾವಿ ಕೊರೆಯುವುದು ಹಾಗೂ ಹನ ನೀರಾವರಿ ಪದ್ಧತಿಯನ್ನು ಅಳವಡಿಸುವ ಕೆಲಸಗಳನ್ನು ಕೈಗೊಳ್ಳಲು ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಅಯುಕ್ತರವರ ದಿನಾಂಕ:16/07/2008 ರ ಟಿಪ್ಪಣಿ.

ತೀರ್ಮಾನ: ಆಯುಕ್ತರವರ ದಿನಾಂಕ:16/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:28/07/2008 ರ ನಡವಳಿಗಳು

**ವಿಷಯದ ಸಂಖ್ಯೆ:331/07-08**

ಬೆಂಗಳೂರು ನಗರ ಪ್ರದೇಶದಲ್ಲಿ ನಾಗರೀಕರು ಕಸವನ್ನು ಅವ್ಯವಸ್ಥಿತವಾಗಿ ಹರಡುವುದನ್ನು ತಪ್ಪಿಸುವ ಬಗ್ಗೆ.

**ಪ್ರಸ್ತಾವನೆ:**

ಬೆಂಗಳೂರು ನಗರವು ಅವ್ಯಾಹತವಾಗಿ ಬೆಳೆದು ಬಂದಿದ್ದು, ಪ್ರತಿ ದಿನ ಸುಮಾರು 3,500 ಟನ್‌ಗಳಷ್ಟು ಕಸವನ್ನು ಸಂಗ್ರಹಿಸಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗಿದೆ. ವಾಸದ ಮನೆಗಳಿಂದ ಕಸವನ್ನು ಮನೆಗಳ ಬಾಗಿಲಿನಿಂದಲೇ ಸಂಗ್ರಹಿಸುವ ಪದ್ಧತಿ ಜಾರಿಯಲ್ಲಿದ್ದು, ಖಾಸಗಿ ಗುತ್ತಿಗೆದಾರರ ಮುಖೇನ ಈ ಕೆಲಸವನ್ನು ಮಾಡಿಸಲಾಗುತ್ತಿದೆ. ಆದರೂ ಸಹ ನಗರದಲ್ಲಿ ಸ್ವಚ್ಛತಾ ಸೇವೆಯ ಕೆಲಸ ಸಮರ್ಪಕ ರೀತಿಯಲ್ಲಿ ನಡೆಯುತ್ತಿಲ್ಲದಿರುವುದು ಕಂಡು ಬಂದಿರುತ್ತದೆ. ನಗರದಲ್ಲಿ ಸ್ವಚ್ಛತೆಯನ್ನು ಕಾಪಾಡುವ ದೃಷ್ಟಿಯಿಂದ ಹಲವು ಕ್ರಮಗಳನ್ನು ಕೈಗೊಳ್ಳುವುದು ಅತ್ಯವಶ್ಯಕವಾಗಿರುತ್ತದೆ. ಆದರೆ ವಾಣಿಜ್ಯ ಉದ್ದೇಶಕ್ಕೆ ಉಪಯೋಗಿಸುತ್ತಿದ್ದ ಕಟ್ಟಡಗಳಿಂದ ಹಾಗೂ ಹಲವು ಬಾರಿ ಅಪಾರ್ಟ್‌ಮೆಂಟ್‌ಗಳಿಂದ ಕಸವನ್ನು ಸಂಗ್ರಹಿಸಲು ತೊಂದರೆಯಾಗುತ್ತಿದೆ.

ಇದಲ್ಲದೇ ಬೆಂಗಳೂರಿನ ಯಾವುದೇ ಸ್ಥಳದಲ್ಲೂ ಸಹ ಕಸವನ್ನು ತಾತ್ಕಾಲಿಕವಾಗಿ ಸಂಗ್ರಹಿಸುವ ತ್ಯಾಜ್ಯ ಗುತ್ತಿಗೆಯನ್ನು ತೆಗೆದು ಬಿಟ್ಟಿರುವುದರಿಂದ, ವಾಣಿಜ್ಯ ಪ್ರದೇಶದಲ್ಲಿ ಉತ್ಪತ್ತಿಯಾಗುತ್ತಿರುವ ಕಸವನ್ನು ಬೀದಿಗೆ ತಳ್ಳುತ್ತಿರುತ್ತಾರೆ. ಈ ಕಾರಣದಿಂದಲೇ ನಗರದ ವಸತಿ ಪ್ರದೇಶದಲ್ಲಿ ಇರುವಷ್ಟು ಶುಚಿತ್ವ ನಗರದ ಮುಖ್ಯ ಬೀದಿಗಳಲ್ಲಿ ಇರುವುದಿಲ್ಲ. ಎಷ್ಟೇ ಕಸವನ್ನು ಗುಡಿಸಿದರೂ, ಪದೇ ಪದೇ ಬೀದಿಯಲ್ಲಿ ಕಸವನ್ನು ಬಿಸಾಡುವುದರಿಂದ ಕಸವನ್ನು ವಿಲೇ ಮಾಡಿದಂತೆ ಕಾಣುವುದಿಲ್ಲ. ಈ ಹಿನ್ನೆಲೆಯಲ್ಲಿ ಕೆಳಕಂಡ ಕ್ರಮಗಳನ್ನು ಕೈಗೊಳ್ಳಬೇಕಾಗಿರುತ್ತದೆ.

1. **ಮುಖ್ಯರಸ್ತೆಗಳಲ್ಲಿ ಕಸದ ತೊಟ್ಟಿಗಳನ್ನು ಇಡಿಸುವ ಬಗ್ಗೆ** : ಈಗಾಗಲೇ ಮೇಲೆ ತಿಳಿಸಿದಂತೆ ಕಸದ ತೊಟ್ಟಿಗಳು ಇಲ್ಲದೇ ಇರುವ ಕಾರಣ ಆರ್ಟೀರಿಯಲ್ ರಸ್ತೆಗಳಲ್ಲಿ ಪ್ರತಿ 100 ಮೀ.ಗಳಿಗೆ 3 ಪ್ಲಾಸ್ಟಿಕ್ ಕಸದ ತೊಟ್ಟಿಗಳನ್ನು ಇಡಿಸುವುದು ಅತ್ಯಂತ ಅವಶ್ಯಕವಾಗಿದೆ. 3 ಪ್ಲಾಸ್ಟಿಕ್ ತೊಟ್ಟಿಗಳಲ್ಲಿ ಒಂದನ್ನು ಡಿಗ್ರೇಡಬಲ್ ಕಸವನ್ನು ಹಾಕಲು, 2ನೇಯದರಲ್ಲಿ ಪೇಪರ್ ಹಾಕಲು ಮತ್ತು 3ನೇಯದರಲ್ಲಿ ಕಲ್ಲು ಮತ್ತು ಕಬ್ಬಿಣದ ಚೂರುಗಳನ್ನು ಹಾಕಲು ಉಪಯೋಗಿಸಬಹುದಾಗಿರುತ್ತದೆ. ಈ ತೊಟ್ಟಿಗಳನ್ನು ದಿನಕ್ಕೆ 2 ಬಾರಿ ಖಾಲಿ ಮಾಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಅಲ್ಲದೇ ಈ ತೊಟ್ಟಿಗಳನ್ನು ಜಾಹೀರಾತು ಏಜೆನ್ಸಿಯ ಮುಖಾಂತರ ಅಂತರ ರಾಷ್ಟ್ರೀಯ ನಗರಗಳಲ್ಲಿ ಅಳವಡಿಸಿರುವ ಮಾದರಿಯಲ್ಲಿ ಅಳವಡಿಸಿದ್ದಲ್ಲಿ ನಗರದ ಸೌಂದರ್ಯವು ಹೆಚ್ಚಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಮೊದಲನೆಯ ಬಾರಿಯಾದ್ದರಿಂದ ಪ್ರಾಯೋಗಿಕವಾಗಿ ಯಾವುದಾದರೂ ಒಂದು ಜಾಹೀರಾತು ಸಂಸ್ಥೆಯ ಮುಖಾಂತರ ಈ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಸೂಕ್ತ. ಪಾಲಿಕೆಯ ಹಣವನ್ನು ನೇರವಾಗಿ ಈ ಬಗ್ಗೆ ಖರ್ಚು ಮಾಡುವ ಯೋಜನೆ ಇರುವುದಿಲ್ಲ.

2. **ಬಸ್ ನಿಲ್ದಾಣಗಳಲ್ಲಿ ಕಸದ ಬುಟ್ಟಿಗಳನ್ನು ಅಳವಡಿಸುವ ಬಗ್ಗೆ** : ಪ್ರತಿ ಬಸ್ ನಿಲ್ದಾಣದಲ್ಲಿ 3 ಕಸದ ಬುಟ್ಟಿಗಳನ್ನು ಇಟ್ಟು 3 ಕಸದ ಬುಟ್ಟಿಗಳಲ್ಲಿ ಒಂದನ್ನು ಡಿಗ್ರೇಡಬಲ್ ಕಸವನ್ನು ಹಾಕಲು, ಎರಡನೇಯದರಲ್ಲಿ ಪೇಪರ್ ಹಾಕಲು ಮತ್ತು 3ನೇಯದರಲ್ಲಿ ಕಲ್ಲು ಮತ್ತು ಕಬ್ಬಿಣದ ಚೂರುಗಳನ್ನು ಹಾಕಲು ಉಪಯೋಗಿಸಬಹುದಾಗಿರುತ್ತದೆ. ಈ ತೊಟ್ಟಿಗಳನ್ನು ದಿನಕ್ಕೆ 2 ಬಾರಿ ಖಾಲಿ ಮಾಡಿಸಲು ಕ್ರಮ ಕೈಗೊಳ್ಳಲಾಗುತ್ತದೆ ಮತ್ತು ಇದಲ್ಲದೇ ಕೆಳಕಂಡ ಹಲವು ರೀತಿಯ ಅಕ್ರಮಗಳನ್ನು ತಡೆಗಟ್ಟಲು ಸಹ ಒಂದು ವ್ಯವಸ್ಥೆಯನ್ನು ಕಲ್ಪಿಸಬೇಕಾಗಿರುತ್ತದೆ.

ಕುಡಿಯುವ ನೀರನ್ನು ಗೃಹೇತರ ಉದ್ದೇಶಕ್ಕೆ ಬಳಕೆ ಮಾಡುವುದು.
ನೀರಿನ ದುರ್ಬಳಕೆ ಅಥವಾ ನಷ್ಟ ಮಾಡುವುದು.
ಎಲ್ಲೆಂದರಲ್ಲಿ ಮಲ ವಿಸರ್ಜನೆ ಮಾಡುವುದು.
ಎಲ್ಲೆಂದರಲ್ಲಿ ಮೂತ್ರ ವಿಸರ್ಜನೆ ಮಾಡುವುದು.
ಕಸವನ್ನು ಎಲ್ಲೆಂದರಲ್ಲಿ ಬಿಸಾಡುವುದು.
ಸಾರ್ವಜನಿಕ ಸ್ಥಳಗಳಲ್ಲಿ ಅಂದವನ್ನು ಕೆಡಿಸುವಂತೆ ಉಗಿಯುವುದು.
ಸಾಕು ನಾಯಿಗಳನ್ನು ರಸ್ತೆಗಳಲ್ಲಿ ಕರೆದುಕೊಂಡು ಬಂದು ಮಲಮೂತ್ರ ವಿಸರ್ಜನೆ ಮಾಡಿಸುವುದು.
ಕಸವನ್ನು ತಳ್ಳುಗಾಡಿಗಳಲ್ಲಿ ಹಾಕದೆ ಇರುವುದು.

ರೀತಿಯ ಕಾರ್ಯಗಳನ್ನು ತಕ್ಷಣವೇ ತಡೆಗಟ್ಟುವ ಅಗತ್ಯವಿರುತ್ತದೆ. ವಾಸ್ತವವಾಗಿ ಲ್ಲಿ ಯಾವ ಯಾವ ಅಕ್ರಮಗಳಿಗೆ ಯಾವ ರೀತಿ ದಂಡವನ್ನು ವಿಧಿಸಬಹುದು ಎನ್ನುವುದನ್ನು ನಿಸಿಪಲ್ ಕಾರ್ಪೊರೇಷನ್ ಕಾಯ್ದೆ, 1976 ರ ಸೆಕ್ಷನ್–431ರ ಪ್ರಕಾರ ಷೆಡ್ಯೂಲ್ (11) ಸಲಾಗಿದೆ. ಕೆ.ಎಂ.ಸಿ. ಕಾಯ್ದೆ ಸೆಕ್ಷನ್–478 ರ ಪ್ರಕಾರ ಎಲ್ಲಾ ಅಪರಾಧಗಳು Cognizable ಈ ಬಗ್ಗೆ 1996 ರಲ್ಲಿ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆಗೆ ಬದಲಾವಣೆ ರಲ್ಲಿ ಮೇಲೆ ಹೇಳಿದ ಅಕ್ರಮಗಳಿಗೆ ಕೆಳಕಂಡಂತೆ ಕೆ.ಎಂ.ಸಿ. ಕಾಯ್ದೆ 1966 ರ of offence Rule-1996) ಪ್ರಕಾರ ರಾಜಿದಂಡ ವಿಧಿಸಲು ಈ ಕೆಳಕಂಡ ಕ್ರಮಗಳನ್ನು

## ಅನುಬಂಧ 'ಎ' (ನಿಯಮ 3 ರಂತೆ)

| ಕ್ಷನ್ ಸಂ. | ಅಪರಾಧ ಸ್ವಚ್ಛತಾ ಉಲ್ಲಂಘನೆಯ ವಿವರಗಳು | 431 ರಂತೆ ದಂಡ ರೂ.ಗಳಲ್ಲಿ | ರಾಜಿ ದಂಡ ರೂ.ಗಳಲ್ಲಿ |
|---|---|---|---|
| 4 | ಕುಡಿಯುವ ನೀರನ್ನು ಗೃಹೇತರ ಉದ್ದೇಶಕ್ಕೆ ಬಳಕೆ ಮಾಡುವುದು. | 100 | 1000 |
| 8 | ನೀರಿನ ದುರ್ಬಳಕೆ ಅಥವಾ ನಷ್ಟ ಮಾಡುವುದು | 50 | 500 |
| 3(2) | ಎಲ್ಲೆಂದರಲ್ಲಿ ಮಲ ವಿಸರ್ಜನೆ ಮಾಡುವುದು | 10 | 100 |
| 3(2) | ಎಲ್ಲೆಂದರಲ್ಲಿ ಮೂತ್ರ ವಿಸರ್ಜನೆ ಮಾಡುವುದು | 10 | 100 |
| 3(2) | ಕಸವನ್ನು ಎಲ್ಲೆಂದರಲ್ಲಿ ಬಿಸಾಡುವುದು. | 10 | 100 |
| 3(2) | ಸಾರ್ವಜನಿಕ ಸ್ಥಳಗಳಲ್ಲಿ ಅಂದವನ್ನು ಕೆಡಿಸುವಂತೆ ಉಗಿಯುವುದು | 10 | 100 |
| (C) | ಸಾಕು ನಾಯಿಗಳನ್ನು ರಸ್ತೆಗಳಲ್ಲಿ ಕರೆದುಕೊಂಡು ಬಂದು ಮಲಮೂತ್ರ ವಿಸರ್ಜನೆ ಮಾಡಿಸುವುದು. | 20 | 200 |
| (1) | ಕಸವನ್ನು ತಳ್ಳುಗಾಡಿಗಳಲ್ಲಿ ಹಾಕದೆ ಇರುವುದು. | 10 | 100 |

ವನ್ನು ಪತ್ತೆ ಹಚ್ಚಿ ದಂಡ ಹಾಕಲು ಯಾವುದೇ ವಿಶೇಷ ವ್ಯವಸ್ಥೆ ಈವರೆಗೆ ಬೆಂಗಳೂರು ನಗರದಲ್ಲಿ ಲ್ಲ. ಈಗಾಗಲೇ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ–1976ರ ಅಡಿಯಲ್ಲಿ ಇಂತಹ ಪ್ರಕರಣಗಳಲ್ಲಿ ಕಾಯ್ದೆ ಪ್ರಕಾರ ಕ್ರಮ ಕೈಗೊಳ್ಳಲು, ಕಟ್ಟುನಿಟ್ಟಿನ ಕ್ರಮಗಳನ್ನು ಲ್ಲ. ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976 ರ ಪ್ರಕಾರ ಬೃಹತ್ ಬೆಂಗಳೂರು ಲಿಕೆಯ ಆಯುಕ್ತರು ಕಾಯ್ದೆಯನ್ನು ಅನುಷ್ಠಾನಕ್ಕೆ ತರಲು ಯೋಜನೆ ರೂಪಿಸಬೇಕಾಗಿರುತ್ತದೆ. ಈ ಲೆ ಹೇಳಿದ ಅಕ್ರಮಗಳನ್ನು ತಡೆಗಟ್ಟಲು ಕೆಳಕಂಡಂತೆ ವ್ಯವಸ್ಥೆ ಮಾಡಲು ಯೋಜಿಸಲಾಗಿದೆ.

ಬೆಂಗಳೂರಿನ ಪ್ರಾದೇಶಿಕ ಸೇವೆ Territorial Army ಯನ್ನು ಬೆಂಗಳೂರು Terriers ಎಂದು ಕರೆಯುತ್ತಾರೆ. ಈ ಸಂಸ್ಥೆಯಲ್ಲಿ ಸಾಮಾನ್ಯ ಸೈನಿಕರು ವರ್ಷದ ಕೆಲ ಸಮಯದಲ್ಲಿ ಮಾತ್ರ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದು, ಮಿಕ್ಕ ಸಮಯದಲ್ಲಿ ಸೇವೆಯನ್ನು ಸಲ್ಲಿಸುತ್ತಿರುವುದಿಲ್ಲ. ಈ ಬಗ್ಗೆ ಶ್ರೀ.ನಂದುಕುಮಾರ್, ಕಮಾಂಡರ್, ಪ್ರಾದೇಶಿಕ ಸೇವೆ, ಬೆಂಗಳೂರು ಇವರೊಂದಿಗೆ ಚರ್ಚಿಸಿದಾಗ ಯಾವುದೇ ಸಮಯದಲ್ಲಿ ಸುಮಾರು 60 ಅಭ್ಯರ್ಥಿಗಳು ಲಭ್ಯವಿರುತ್ತಾರೆಂದು ತಿಳಿಸಿರುತ್ತಾರೆ. ಮೊದಲ ಹಂತದಲ್ಲಿ Territorial Army ಗೆ ಸೇರಿದ ವ್ಯಕ್ತಿಗಳನ್ನು ಬೆಂಗಳೂರಿನ ಕಸ ನಿರ್ವಹಣೆ ಪೋಲಿಸರನ್ನಾಗಿ (Litter Cops) ಎಂದು ನೇಮಿಸಿಕೊಳ್ಳಲು ಉದ್ದೇಶಿಸಲಾಗಿದೆ, ಈ ಸಂಸ್ಥೆಯ ಅಧಿಕಾರಿಗಳನ್ನು Arterial ರಸ್ತೆಗಳ ಮುಖ್ಯ ಸ್ಥಳಗಳಲ್ಲಿ ತ್ಯಾಜ್ಯ ವಸ್ತು ಸಂಗ್ರಹಣೆ ಬಗ್ಗೆ ಗಮನ ಹರಿಸಲು ನೇಮಿಸಲಾಗುವುದು. ಪ್ರತಿಯೊಂದು ಅಧಿಕಾರಿಗೂ ಒಂದು ಡಿಜಿಟಲ್ ಕ್ಯಾಮರಾ ನೀಡುವ ವ್ಯವಸ್ಥೆ ಇದೆ. ಅಕ್ರಮ ನಡೆಯುವ ಸಮಯದಲ್ಲಿ (ತ್ಯಾಜ್ಯ ನಿರ್ವಹಣೆಯಲ್ಲಿ) ಈ ಅಧಿಕಾರಿಗಳು ಫೋಟೋ ಸಹಿತ ಮಾಹಿತಿಯನ್ನು ಸಂಗ್ರಹಿಸಿ ತದನಂತರ ಮೇಲೆ ಹೇಳಿದಂತೆ ರಾಜಿದಂಡವನ್ನು ಅಕ್ರಮ ಮಾಡಿದ ವ್ಯಕ್ತಿಗೆ ವಿಧಿಸಬೇಕಾಗಿರುತ್ತದೆ. ಕೆ.ಎಂ.ಸಿ. ಕಾಯ್ದೆ, ಸೆಕ್ಷನ್–66ರ ಪ್ರಕಾರ ಮಾನ್ಯ ಆಯುಕ್ತರು ರಾಜಿದಂಡವನ್ನು ವಿಧಿಸುವ ಅಧಿಕಾರವನ್ನು ವಲಯದ ಆರೋಗ್ಯಾಧಿಕಾರಿಗಳು/ಆರೋಗ್ಯ ವೈದ್ಯಾಧಿಕಾರಿಗಳಿಗೆ ಪ್ರತ್ಯಾಯೋಜನೆ ಮಾಡಬೇಕಾಗಿರುತ್ತದೆ ಹಾಗೂ Territorial Army ಅಧಿಕಾರಿಗಳಿಗೆ ರಾಜಿದಂಡವನ್ನು ವಸೂಲಿ ಮಾಡುವ ಅಧಿಕಾರವನ್ನು ಮಾತ್ರ ನೀಡಬೇಕಾಗಿರುತ್ತದೆ. ಈ ರೀತಿ ದಂಡ ವಿಧಿಸಿದ ನಂತರ ಬೆಂಗಳೂರು ಮಹಾನಗರ ಪಾಲಿಕೆ ನೀಡಲಾಗಿರುವ ಹೋಲೋಗ್ರಾಮ್ ಆಧಾರಿತ ರಸೀದಿಯನ್ನು ಸ್ಥಳದಲ್ಲಿಯೇ ನೀಡಲಿದ್ದಾರೆ. ಈ ರೀತಿ ಕ್ರಮವನ್ನು ಕೈಗೊಳ್ಳಲು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ–1976ರಲ್ಲಿ ಅವಕಾಶ ಇರುತ್ತದೆ. ಒಂದು ವೇಳೆ ದಂಡ ವಿಧಿಸಿದ ವ್ಯಕ್ತಿಯು ಸ್ಥಳದಲ್ಲೇ ದಂಡದ ಮೊತ್ತವನ್ನು ನೀಡಲು ಒಪ್ಪದಿದ್ದಲ್ಲಿ, ಇರುವ ದಾಖಲೆಗಳನ್ನು ಉಪಯೋಗಿಸಿಕೊಂಡು ಸ್ಥಳೀಯ ಅಧಿಕಾರಿಗಳ ಮೂಲಕ ನೋಟೀಸ್ ಅನ್ನು ನೀಡಿ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ–1976ರ ಕಾಲಂ–431ರ ಅನ್ವಯ ದಾವೆಯನ್ನು ಹೂಡಬಹುದಾಗಿರುತ್ತದೆ.

ನಗರ ಪಾಲಿಕೆ ನೌಕರರಿಂದ ಈ ರಾಜಿದಂಡ ವಸೂಲಾತಿ ನಿರ್ವಹಿಸಲು ಸಾಧ್ಯವಾಗದೇ ಇರುವುದರಿಂದ ಈ ಕೆಲಸವನ್ನು Territorial Army ರವರಿಗೆ ವಹಿಸಿದಲ್ಲಿ ಸದರಿಯವರಿಂದ ಉತ್ತಮ ಕಾರ್ಯಕ್ಷಮತೆಯನ್ನು ನಿರೀಕ್ಷಿಸಬಹುದಾಗಿರುತ್ತದೆ. ಈ ಕೆಲಸವನ್ನು ನಿರ್ವಹಿಸಲು ಸದರಿ ಸಂಸ್ಥೆಯವರಿಗೆ ಕೆಳಕಂಡಂತೆ ಸಂಭಾವನೆ ನೀಡಲು ಯೋಜಿಸಲಾಗಿದೆ.

1. ಬೆಂಗಳೂರು Terrier ಸಂಸ್ಥೆಯವರಿಗೆ 60 ಮಂದಿ Litter Cops ಗಳ ರೂಪದಲ್ಲಿ ಅವರ ಸೇವೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಒದಗಿಸಿ ಕೊಡುವುದು.

2. Territorial Army ಮುಖೇನ ನಿಯೋಜಿಸಲ್ಪಡುವ ಪ್ರತಿ ವ್ಯಕ್ತಿ ಅಂದರೆ Litter Copsಗೆ ತಿಂಗಳಿಗೆ ರೂ.3,000/– ಗಳ ಸಂಭಾವನೆ ನೀಡಲಾಗುವುದು. ಅದರಂತೆ, ಒಟ್ಟಾರೆ 60 ಮಂದಿ Litter Cops ಗಳಿಗೆ ಮಾಹೆಯಾನ ರೂ.1,80,000/– ಗಳ ಸಂಭಾವನೆ ನೀಡುವುದು.

3. Litter Cops ಗಳ ಮೇಲುಸ್ತುವಾರಿಗಾಗಿ ಒಬ್ಬ ಅಧಿಕಾರಿ ಹಾಗೂ ಇಬ್ಬರು litter Marshal ಗಳಿಗೆ ಮಾಹೆಯಾನ ರೂ.8,000/– ರಂತೆ ಇಬ್ಬರಿಗೆ ರೂ.16,000/– ಗಳ ಸಂಭಾವನೆ ನೀಡುವುದು.

4. ಸಮವಸ್ತ್ರ, ಬ್ಯಾಡ್ಜ್‌ಗಳು ಆಗಾಗ್ಗೆ ಹರಿಯುವುದರಿಂದ ಇವುಗಳನ್ನು ಖರೀದಿಸಲು ಪ್ರತಿ Litter Cops ಗೆ ವಾರ್ಷಿಕವಾಗಿ ರೂ.4,000/- ದಂತೆ ಒಟ್ಟಾರೆ 60 ಮಂದಿXರೂ4,000=ರೂ.2,40,000/- (ರೂ.ಎರಡು ಲಕ್ಷದ ನಲವತ್ತು ಸಾವಿರ ಮಾತ್ರ)ಗಳ ಅನುದಾನ ನೀಡಲಾಗುವುದು. ಹಾಗೂ ಇದೇ ರೀತಿ ಲಿಟ್ಟರ್ ಮಾರ್ಷಲ್‌ರಿಗೆ ರೂ.4,000/- ದಂತೆ ಒಟ್ಟಾರೆ 2 ಮಂದಿಗೆ ರೂ.8,000/- ಗಳ ಅನುದಾನ ನೀಡುವುದು.

5. ಟೆರಿಟೋರಿಯಲ್ ಆರ್ಮಿರವರಿಗೆ Litter Cops ಗಳ ಪೂರ್ವಭಾವಿ ಸಿದ್ಧತೆ ಕೈಗೊಳ್ಳಲು ದಿನಾಂಕ:01/01/2008 ರಿಂದ ಜಾರಿಗೆ ಬರುವಂತೆ ಸಂಭಾವನೆ ನೀಡುವುದು.

6. ಸಮವಸ್ತ್ರಗಳ ನಿರ್ವಹಣೆಗಾಗಿ ಪ್ರತಿ Litter Cops ಗೆ ಮಾಹೆಯಾನ ರೂ.150/- ಗಳ ಕಿಟ್ ನಿರ್ವಹಣಾ ಭತ್ಯೆ ನೀಡಲಾಗುವುದು. ಹಾಗೂ ಇಬ್ಬರು ಲಿಟ್ಟರ್ ಮಾರ್ಷಲ್‌ಗಳಿಗೂ ಸಹಾ ಮಾಹೆಯಾನ ರೂ.150/- ಗಳಂತೆ ಒಟ್ಟಾರೆ ರೂ.9,300/- ಗಳ ಕಿಟ್ ನಿರ್ವಹಣೆ ಭತ್ಯೆ ನೀಡುವುದು.

7. Litter Cops ಗಳು ಸಂಗ್ರಹಿಸುವ ದಂಡದ ಒಟ್ಟು ಮೊತ್ತದಲ್ಲಿ ಶೇ.25% ಮೊತ್ತವನ್ನು Litter Cops ಗುಂಪಿಗೆ ನೀಡಲು ಉದ್ದೇಶಿಸಿರುವ ಮೊತ್ತವನ್ನು ಶೇ.40% ಹೆಚ್ಚಿಸುವುದು.

8. ಪ್ರಾರಂಭಿಕ ಖರ್ಚು ವೆಚ್ಚಕ್ಕಾಗಿ ರೂ.30,000/- Cushion Fund ನೀಡಲು ಕೋರಿದ್ದು, ಟೆರಿಟೋರಿಯಲ್ ಆರ್ಮಿರವರು ಕೋರಿರುವಂತೆ ಪ್ರಾರಂಭಿಕ ಖರ್ಚು ವೆಚ್ಚಗಳಿಗಾಗಿ ರೂ.30,000/- ಗಳನ್ನು ನೀಡುವುದು.

9. Litter Marshal ಗಳು ಮತ್ತು Litter Cops ಗಳ ಓಡಾಟಕ್ಕೆ ಅನುಕೂಲವಾಗುವಂತೆ ಲಘು ವಾಹನವನ್ನು ಸದರಿ ಸಂಸ್ಥೆಯವರೇ ಬಾಡಿಗೆ ಮುಖಾಂತರ ಪಡೆಯಲು ಮಾಸಿಕವಾಗಿ ಈಗ ಹಾಲಿ ಬೇರೆ ಖಾಸಗಿ ವಾಹನಗಳಿಗೆ ನಗರಪಾಲಿಕೆಯಿಂದ ನೀಡುತ್ತಿರುವಂತೆ ವಾಹನ ಭತ್ಯೆ ನೀಡುವುದು.

0. ಯೋಜನೆಯ ಅವಧಿಯಲ್ಲಿ ಆಕಸ್ಮಿಕವಾಗಿ ಒದಗಬಹುದಾದ ಖರ್ಚು ವೆಚ್ಚ ಸರಿದೂಗಿಸಲು ಹಣದ ಮಂಜೂರಾತಿ ಕೋರಿದಲ್ಲಿ ಮಂಜೂರು ಮಾಡುವುದು.

ಈ ಯೋಜನೆಯಲ್ಲಿ ವಸೂಲಿ ಮಾಡಲಾಗುವ ರಾಜಿದಂಡವನ್ನು ಪಾಲಿಕೆಗೆ ಪಾವತಿ ಮಾಡಲು ನಿಯೋಜಿತ ಅಧಿಕಾರಿಗಳನ್ನು ನೇಮಿಸಿ, ಈ ಮಾಹಿತಿಯನ್ನು ನೀಡುವುದು.

ರಾಜಿದಂಡವನ್ನು ಪಾವತಿಸಲು ನಿರಾಕರಿಸುವವರ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡಲು ನಿಯೋಜಿತ ಅಧಿಕಾರಿಗಳನ್ನೂ ಸಹ ನೇಮಿಸಿ ಇದರ ಮಾಹಿತಿಯನ್ನು ನೀಡುವುದು.

ಪ್ರತಿಯೊಬ್ಬ ಅಧಿಕಾರಿಗೂ ಹೋಲೋಗ್ರಾಮ್ ಅಂಟಿಸಿದ ರೂ.50, 100, 500, 1000/-ಗಳ ರಸೀದಿ ಪುಸ್ತಕವನ್ನು ನೀಡಿ ಯಾವುದೇ ಅಕ್ರಮ ಎಸಗಿದ ವ್ಯಕ್ತಿಗೆ ಹೋಲೋಗ್ರಾಮ್ ಅಂಟಿಸಿದ ರಸೀದಿಯಲ್ಲಿ ಅವರ ಹೆಸರನ್ನು ನಮೂದಿಸಿ ಅವರಿಂದ ದಂಡವನ್ನು ಪಡೆಯಬಹುದಾಗಿರುತ್ತದೆ.

60 ಮಂದಿ Litter Cops ಗಳಿಗೆ ಅವಶ್ಯವಿರುವ ಡಿಜಿಟಲ್ ಕ್ಯಾಮರಾಗಳನ್ನು ತಲಾ ರೂ.9,000 ರಂತೆ ರೂ.5,40,000/- ಗಳ ವೆಚ್ಚದಲ್ಲಿ ನಗರಪಾಲಿಕೆ ವತಿಯಿಂದ ಖರೀದಿಸಿ ವಿತರಿಸಬಹುದು.

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ಸೆಕ್ಷನ್-66 ರ ಅನ್ವಯ ರಾಜಿದಂಡವನ್ನು ವಿಧಿಸುವ ಅಧಿಕಾರವನ್ನು ವಲಯದ ಆರೋಗ್ಯಾಧಿಕಾರಿಗಳು/ಆರೋಗ್ಯ ವೈದ್ಯಾಧಿಕಾರಿಗಳಿಗೆ ಪ್ರತ್ಯಾಯೋಜನೆ ಮಾಡುವುದು. ಹಾಗೂ Territorial Army ಯ ಅಧಿಕಾರಿಗಳಿಗೆ ರಾಜಿದಂಡದ ಮೊತ್ತವನ್ನು ವಸೂಲಿ ಮಡುವ ಅಧಿಕಾರವನ್ನು ನೀಡುವುದು.

ಸದರಿ ಯೋಜನೆಗೆ ವಾರ್ಷಿಕವಾಗಿ ಅಂದಾಜು ರೂ.31,79,300/- ಖರ್ಚಾಗಲಿದ್ದು, ದಂಡದ ಮೂಲಕ ವಾರ್ಷಿಕವಾಗಿ ರೂ.30.00 ಲಕ್ಷ ವಸೂಲಾತಿಯಾಗಬಹುದಾಗಿರುತ್ತದೆ. ಈ ವಸೂಲಾತಿಯಾಗುವ ಮೊತ್ತದಲ್ಲಿ ಟೆರಿಟೋರಿಯಲ್ ಆರ್ಮಿರವರಿಗೆ ಸಂಬಳ ನೀಡಲು ಸಾಧ್ಯವಾಗುತ್ತದೆ. ಪ್ರಾರಂಬಿಕ ಹಂತದಲ್ಲಿ ಈ ಬಾಬ್ತಿಗಾಗಿ ಹಣ ಖರ್ಚಾಗಬಹುದಾದರೂ Litter Cops ಗಳು ರಸ್ತೆಗಳಲ್ಲಿ ಕೆಲಸ ಮಾಡಲು ಪ್ರಾರಂಭಿಸಿದ ನಂತರ ಗಲೀಜು ಮಾಡುವ ಸಂದರ್ಭಗಳು ಕಡಿಮೆಯಾಗಲಿದ್ದು, ದಂಡವಿಧಿಸುವ ಸಂದರ್ಭಗಳು ಕಡಿಮೆಯಾಗಲಿವೆ,

ಮೇಲ್ಕಂಡ ಅಂಶಗಳನ್ನು ಮಾನ್ಯ ಆಡಳಿತಗಾರರ ಅವಗಾಹನೆಗೆ ತರುತ್ತಾ, ಅನುಬಂಧ-'ಎ' ರಲ್ಲಿ ಪ್ರಸ್ತಾಪಿಸಿರುವ ಅಪರಾಧಗಳಿಗೆ ಸಾರ್ವಜನಿಕರ ಮೇಲೆ ದಂಡ ವಿಧಿಸುವ ಕಾರ್ಯವನ್ನು M/s Territorial Army ರವರಿಗೆ ವಹಿಸುವ ಬಗ್ಗೆ ಮತ್ತು ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅವಶ್ಯವಿರುವ ಮೇಲೆ ತಿಳಿಸಿದ ಕ್ರಮ ಸಂಖ್ಯೆ (1) ರಿಂದ (8) ರ ವರೆಗಿನ ಪ್ರಸ್ತಾವನೆಯನ್ನು ಅನುಮೋದಿಸುವ ಬಗ್ಗೆ ಮತ್ತು ಈ ಕಾರ್ಯಕ್ಕಾಗಿ ವಾರ್ಷಿಕವಾಗಿ ಅಂದಾಜು ರೂ.31,79,300/- (ರೂ.ಮೂವತ್ತೊಂದು ಲಕ್ಷದ ಎಪ್ಪತ್ತೊಂಬತ್ತು ಸಾವಿರದ ಮೂರು ನೂರು ಮಾತ್ರ) ಖರ್ಚಾಗಲಿದ್ದು, (ವಾಹನಭತ್ಯೆ, ಆಕಸ್ಮಿಕ ಖರ್ಚು-ವೆಚ್ಚ (Incidental Expenses) ಗಳನ್ನು ಬಿಟ್ಟು) ಈ ಮೊತ್ತವನ್ನು **ಲೆಕ್ಕ ಶೀರ್ಷಿಕೆ:12, ಆರೋಗ್ಯ-ಸಾಮಾನ್ಯ, ಸಾರ್ವಜನಿಕ ಆರೋಗ್ಯ, ಸ್ವಚ್ಚತೆ ಮತ್ತು ಕಸ ಸಾಗಾಣಿಕೆಗಾಗಿ** ಮೀಸಲಿಟ್ಟಿರುವ ಮೊತ್ತದಲ್ಲಿ ಈ ಖರ್ಚನ್ನು ಭರಿಸಿ, ಮುಂದಿನ ಕ್ರಮವಹಿಸುವ ಬಗ್ಗೆ ಮಾನ್ಯ ಆಡಳಿತಗಾರರ ಮುಂದೆ ನುಮೋದನೆಗಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:01/01/2008 ರ ಪರಿಷ್ಕೃತ ಟಿಪ್ಪಣಿ.

ತೀರ್ಮಾನ: ಆಯುಕ್ತರವರ ದಿನಾಂಕ:01/01/2008ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:29/07/2008 ರ ನಡವಳಿಗಳು**

**ವಿಷಯದ ಸಂಖ್ಯೆ:295/2008-09**

ಕೃಷ್ಣರಾಜಪುರ ನಗರ ಸಭೆಯ ವ್ಯಾಪ್ತಿಯಲ್ಲಿ ಬರುವ ದೊಡ್ಡನೆಕುಂದಿ ಕೆರೆ ಹೆಚ್.ಎ.ಎಲ್ ಮಾರತ್‌ಹಳ್ಳಿ ಮುಖ್ಯ ರಸ್ತೆಯವರೆಗೆ ಬೃಹತ್ ಮಳೆ ನೀರು ಚರಂಡಿಗಳಲ್ಲಿ ಮಣ್ಣಿನ ಕೆಲಸ, ಕಲ್ಲು ಕಟ್ಟಡದ ಗೋಡೆಗಳ/ಆರ್.ಸಿ.ಸಿ ತಡೆಗೋಡೆಗಳು ಹಾಗೂ ಸೇತುವೆಗಳ (ಕಲ್ವರ್ಟ್) ನಿರ್ಮಾಣ ಕಾಮಗಾರಿಯ ಅಂದಾಜು ಪಟ್ಟಿಯ ಬಗ್ಗೆ.

**ಪ್ರಸ್ತಾವನೆ:**

ಕೃಷ್ಣರಾಜಪುರ ನಗರ ಸಭೆಯ ವ್ಯಾಪ್ತಿಯಲ್ಲಿ ಬರುವ ದೊಡ್ಡನೆಕುಂದಿ ಕೆರೆ ಹೆಚ್.ಎ.ಎಲ್ ಮಾರತ್‌ಹಳ್ಳಿ ಮುಖ್ಯ ರಸ್ತೆಯವರೆಗೆ ಬೃಹತ್ ಮಳೆ ನೀರು ಚರಂಡಿಗಳಲ್ಲಿ ಮಣ್ಣಿನ ಕೆಲಸ, ಕಲ್ಲು ಕಟ್ಟಡದ ಗೋಡೆಗಳ/ಆರ್.ಸಿ.ಸಿ ತಡೆಗೋಡೆಗಳು ಹಾಗೂ ಸೇತುವೆಗಳ (ಕಲ್ವರ್ಟ್) ನಿರ್ಮಾಣ ಕಾಮಗಾರಿಯ ರೂ.364.00 ಲಕ್ಷಗಳಿಗೆ ತಾಂತ್ರಿಕ ಮಂಜೂರಾತಿ ಹಾಗೂ ಆಡಳಿತಾತ್ಮಕ ಮಂಜೂರಾತಿ ದೊರೆತ್ತಿರುತ್ತದೆ.

ಸದರಿ ಕಾಮಗಾರಿಯನ್ನು ಅಧೀಕ್ಷಕ ಅಭಿಯಂತರರು (ಯೋಜನೆ), ಬೆಂಗಳೂರು ಮಹಾನಗರ ಪಾಲಿಕೆರವರು ಶ್ರೀ.ವಿ.ಬಾಲಕೋಟಾ ರೆಡ್ಡಿ, ಗುತ್ತಿಗೆದಾರರಿಗೆ ರೂ.4,05,01,494.00 ಗಳಿಗೆ ಕಾರ್ಯಾದೇಶ ನೀಡಿರುತ್ತಾರೆ. ಅದರಂತೆ, ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸಿದ್ದು, ಕಾಮಗಾರಿಯು ಪ್ರಗತಿಯಲ್ಲಿದ್ದ ಸಂದರ್ಭದಲ್ಲಿ ಮಾನ್ಯ ಜಂಟಿ ಆಯುಕ್ತರು (ಕಾಮಗಾರಿ) ರವರು ಸ್ಥಳ ಪರಿಶೀಲನೆ ಮಾಡಿ ಕಾರ್ಯಪಾಲಕ ಅಭಿಯಂತರರು (SWD) ರವರಿಗೆ ಕಾಮಗಾರಿಯನ್ನು ಮುಂದುವರೆಸದಂತೆ ನಿರ್ದೇಶನ ನೀಡಲಾಗಿತ್ತು. ಆ ಪ್ರಯುಕ್ತ ಗುತ್ತಿಗೆದಾರರು ಕಾಮಗಾರಿಯನ್ನು ಸ್ಥಗಿತಗೊಳಿಸಿದ್ದರು. ಆದರೆ ದಿನಾಂಕ:14/12/2007 ರಂದು ವಿಶೇಷ ಆಯುಕ್ತರು ಕಾಮಗಾರಿಯನ್ನು ಪರಿಷ್ಕೃತ ಅಂದಾಜಿನ ಪ್ರಕಾರ ಪ್ರಾರಂಭಿಸಿ ಶೀಘ್ರವೇ ಮುಗಿಸಲು ಸೂಚಿಸಿರುತ್ತಾರೆ.

ದಿನಾಂಕ:17/05/2008 ರಂದು ಮುಖ್ಯ ಅಭಿಯಂತರರು (SWD) ರವರು ಕಾಮಗಾರಿ ಪರಿವೀಕ್ಷಣೆ ಮಾಡಿ 2008-09ನೇ ಸಾಲಿನ ದರಗಳನ್ನು ಅಳವಡಿಸಿಕೊಂಡು ಪರಿಷ್ಕೃತ ಅಂದಾಜನ್ನು ತಯಾರಿಸಲು ಸೂಚಿಸಿರುತ್ತಾರೆ. ಅದರಂತೆ ರೂ.4,03,81,252.70 ಗಳಿಗೆ ಪರಿಷ್ಕೃತ ಅಂದಾಜನ್ನು 2008-09ನೇ ಸಾಲಿನ ದರಸೂಚಿಯ ಮೇಲೆ ಗುತ್ತಿಗೆದಾರ Evaluated TP ಯನ್ನು ಅಳವಡಿಸಿಕೊಂಡು ತಯಾರಿಸಲಾಗಿದೆ. ಪರಿಷ್ಕೃತ ಅಂದಾಜಿನಲ್ಲಿ ಟೆಂಡರ್ ಪರಿಮಾಣದ ಶೇಕಡ 125% ಕ್ಕಿಂತ ಹೆಚ್ಚಿಗೆ ಬರುವ ಐಟಂಗಳಾದ 3(b),3(f), 3(g), 3(j), 3 (k),IT No.5 It No.9, It No.11, It No.19 ಗಳಿಗೆ PWG Form-45 ರಲ್ಲಿ ವರ್ಕ್ ಸ್ಲಿಪ್ ತಯಾರಿಸಿ, ಮೂಲ ಅಂದಾಜಿನ ಐಟಂ ನಂ.19ರಲ್ಲಿ HYSD Steel ಅನ್ನು ಅಳವಡಿಸಿಕೊಳ್ಳಲಾಗಿತ್ತು. ಪ್ರಸ್ತುತ ಮಾರುಕಟ್ಟೆಯಲ್ಲಿ HYSD Steel ಲಭ್ಯವಿರುವುದರಿಂದ TMT Steel ಅನ್ನು ಅಳವಡಿಸಿಕೊಂಡು EIRL PWG-71 ರಲ್ಲಿ ತಯಾರಿಸಿದೆ.

ಸದರಿ ಕಾಮಗಾರಿ ಪರಿಷ್ಕೃತ ಅಂದಾಜು ಮೊತ್ತ ರೂ.4,03,81,252.70 ಗಳಿಗೆ ಆಡಳಿತಾತ್ಮಕ ಅನುಮೋದನೆ, PWG Form-45 ನಲ್ಲಿ ತಯಾರಿಸಿರುವ ವರ್ಕ್ ಸ್ಲಿಪ್ ಮತ್ತು EIRL PWG-71 ರಲ್ಲಿ ತಯಾರಿಸಿರುವ EIRL ಗೆ ಅನುಮೋದನೆ ಕೋರಿ ಮಾನ್ಯ ಆಡಳತಗಾರರ ಮುಂದೆ ಮಂಡಿಸಿರುವ ಅಯುಕ್ತರವರ ದಿನಾಂಕ:30/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:30/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು